


ಯಾವುದು, ನಿಜ ಯಾವುದು ಎನ್ನುವುದೂ ತಿಳಿಯದಂತೆ ಕಥೆ ವಿಭ್ರಮೆಗೊಳಿಸುತ್ತದೆ.

ಸ್ವೀಡನ್ನಿನಲ್ಲಿ ಹುಟ್ಟಿ ಬೆಳೆದ ಫ್ರೆಡ್ರಿಕ್ ವೆಂಜೆಲ್, 2004ರಲ್ಲಿ ನಿರ್ಮಿಸಿದ ಮೊದಲ ಚಿತ್ರ 'ದಿ ಗಿಟಾರ್ ಮೊಂಗೊಲಾಯ್ಡ್' ಮಾಸ್ಕೊ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರಶಸ್ತಿ ಗಳಿಸಿತ್ತು. ಈತ ನಿರ್ಮಿಸಿದ ಕಿರುಚಿತ್ರ 'ಇನ್ಸಿಡೆಂಟ್' ಬರ್ಲಿನ್ ಚಿತ್ರೋತ್ಸವದಲ್ಲಿ ಪ್ರಶಸ್ತಿ ಗೆದ್ದಿತ್ತು. 2014ರಲ್ಲಿ ಈತ ನಿರ್ದೇಶಿಸಿದ 'ಫೋರ್ಸ್ ಮಜೂರ್' ಚಿತ್ರ ಕೂಡಾ ಸ್ವೀಡನ್ನಿನಿಂದ ಆಸ್ಕರ್ ಪ್ರಶಸ್ತಿಗೆ ನಾಮಕರಣ ಹೊಂದಿದ್ದರೂ ಅಂತಿಮ ಸುತ್ತಿಗೆ ಆಯ್ಕೆ ಆಗಿರಲಿಲ್ಲ. ಆದರೆ ಅದಕ್ಕೆ ಕೇನ್ಸ್ ಚಿತ್ರೋತ್ಸವದಲ್ಲಿ ಜ್ಯೂರಿ ಪ್ರಶಸ್ತಿ ಲಭಿಸಿತ್ತು.

## ಎ ಫ್ಯಾಂಟಾಸ್ಟಿಕ್ ವುಮನ್

ಮರೀನಾ ಮತ್ತು ಓರ್ಲಾಂಡೊ ಎಂಬ ಪ್ರೇಮಿಗಳ ವಿಭಿನ್ನ ಕಥಾನಕ. ಮರೀನಾ ಪ್ರೀತಿಸಿದ್ದು ಮತ್ತು ಜೀವಿಸಿದ್ದು ತನಗಿಂತ 30 ವರ್ಷ ದೊಡ್ಡವನಾದ ಓರ್ಲಾಂಡೊ ಜತೆಗೆ. ಅವರ ಅದಮ್ಯ ಪ್ರೀತಿಗೆ ವಯಸ್ಸು ಅಡ್ಡಬರಲಿಲ್ಲ. ಸಂಭ್ರಮದ ಬರ್ತ್‌ಡೇ ಆಚರಣೆಯ ಬಳಿಕ, ಅದೊಂದು ದಿನ ಓರ್ಲಾಂಡೊ ಒಮ್ಮಿಂದೊಮ್ಮೆಲೆ ಕುಸಿದುಬಿದ್ದ. ತಕ್ಷಣ ಮರೀನಾ ಆತನನ್ನು ಆಸ್ಪತ್ರೆಗೆ ಕೊಂಡೊಯ್ಯುತ್ತಾಳೆ. ಆದರೆ ಅಲ್ಲಿ ಆತ ಸತ್ತಿದ್ದಾನೆ ಎಂದು ವೈದ್ಯರು ಘೋಷಿಸುತ್ತಾರೆ. ಒಮ್ಮಿಂದೊಮ್ಮೆಲೆ ಎರಗಿದ ಈ ಆಘಾತವನ್ನು ಹೇಗೆ ಎದುರಿಸಬೇಕು ಎಂದು ಮರೀನಾ ಯೋಚಿಸುತ್ತಿರುವಾಗಲೇ ಒಂದರ ಹಿಂದೆ ಒಂದರಂತೆ ಆಘಾತಗಳು ಎದುರಾಗುತ್ತವೆ. ಆಸ್ಪತ್ರೆಯಲ್ಲಿ ಓರ್ಲಾಂಡೋನನ್ನು ತಪಾಸಣೆ ಮಾಡಿದ ವೈದ್ಯರು ಮತ್ತು ಆತನ ಕುಟುಂಬದ ಸದಸ್ಯರು ಮರೀನಾ ಮೇಲೆ ಅನುಮಾನ ಪಡುತ್ತಾರೆ. ಓರ್ಲಾಂಡೋ ಸಾವಿಗೆ ಈಕೆಯೇ ಕಾರಣ

